ಕರ್ನಾಟಕ ಸರ್ಕಾರ

ಸಂಖ್ಯೆ: ಸಿಬ್ಬಂದಿ-ವಿವಿಧ-೬೬:೨೦೦೨-೨೦೦೩

ನಿರ್ದೇಶಕರ ಕಛೇರಿ,
ಭೂಮಾಪನ ಕಂದಾಯ ವ್ಯವಸ್ಥೆ
ಮತ್ತು ಭೂದಾಖಲೆಗಳ ಇಲಾಖೆ,
ಬೆಂಗಳೂರು, ದಿನಾಂಕ: ೦೮-೧೧-೨೦೦೨.

## ಸುತ್ತೋಲೆ

ವಿಷಯ: ಸಿಬ್ಬಂದಿಯು ಸಮಯಪಾಲನೆ ಹಾಗೂ
ಕಛೇರಿ ಶಿಸ್ತು ಪಾಲಿಸುವ ಬಗ್ಗೆ.

...

ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸರ್ಕಾರಿ ವಿವಿಧ ಕಛೇರಿಗಳಿಗೆ ಅನಿರೀಕ್ಷಿತ ಭೇಟಿ ನೀಡುತ್ತಿರುವುದು ದಿನಪತ್ರಿಕೆಯಿಂದ ಕಂಡುಬರುತ್ತದೆ ಹಾಗೂ ಈ ಇಲಾಖೆಯ ಕಛೇರಿಗಳಿಗೂ ಭೇಟಿ ನೀಡುವ ಸಂಭವವಿರುತ್ತದೆ.

ಕಛೇರಿಯಲ್ಲಿ ಸಮಯಪಾಲನೆ ಹಾಗೂ ಕಛೇರಿ ಶಿಸ್ತು ಪಾಲಿಸುವುದು ಎಲ್ಲ ನೌಕರರ ಆದ್ಯ ಕರ್ತವ್ಯವಾಗಿರುತ್ತದೆ. ಆದ್ದರಿಂದ ಎಲ್ಲ ನೌಕರರು ತಮ್ಮ ತಮ್ಮ ಕಛೇರಿಗಳಿಗೆ ಬೆಳಿಗ್ಗೆ ೧೦.೦೦ ಗಂಟೆಗೆ ಸರಿಯಾಗಿ ಹಾಜರಾಗಿ ತಮ್ಮ ಕೆಲಸಗಳನ್ನು ನಿರ್ವಹಿಸತಕ್ಕದ್ದು. ಕಛೇರಿ ವೇಳೆ ೧೦.೦೦ ರಿಂದ ೧.೩೦ ಹಾಗೂ ೨.೧೫ ರಿಂದ ೫.೩೦ ರವರೆಗೆ ಕಛೇರಿಯ ತಮ್ಮ ತಮ್ಮ ಆಸನಗಳಲ್ಲಿ ಇದ್ದು ಸರ್ಕಾರಿ ಕೆಲಸ ನಿರ್ವಹಿಸತಕ್ಕದ್ದು. ವೃಥಾ ಕಛೇರಿಯ ಆವರಣದಲ್ಲಿ ತಿರುಗಾಟ ನಡೆಸಬಾರದೆಂದೂ ಹಾಗೂ ಕಛೇರಿ ವೇಳೆಯಲ್ಲಿ ನೌಕರರು ಅವರ ಸೀಟಿನಲ್ಲಿರದಿರುವುದು ನನ್ನ ಗಮನಕ್ಕೆ ಬಂದಲ್ಲಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಅವರನ್ನು ಶಿಸ್ತುಕ್ರಮಕ್ಕೊಳಪಡಿಸಲಾಗುವುದೆಂದು ಹಾಗೂ ಎಲ್ಲಾ ಸಿಬ್ಬಂದಿಯವರು ಸ್ವಚ್ಛತೆಯ ಬಗ್ಗೆಯೂ ಸಹ ತಮ್ಮ ಗಮನಹರಿಸತಕ್ಕದ್ದೆಂದು ಈ ಮೂಲಕ ತಿಳಿಸಿದೆ.

ನಿರ್ದೇಶಕರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪ್ರತಿಯನ್ನು:
(೧) ಇಲಾಖೆಯ ಎಲ್ಲಾ ಕಛೇರಿ ಮುಖ್ಯಸ್ಥರಿಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
(೨) ಸುತ್ತೋಲೆಯನ್ನು ಕೇಂದ್ರ ಕಛೇರಿ ಎಲ್ಲಾ ನೌಕರರಿಗೂ ಪರಿಚಲಿಸಿದೆ.

ಪು.ಶಿ.ನೋ.

ಕೆವಿಎಸ್.